ಒಣ ಬೇಸಗೆ; ಮಳೆ ಕಾಣದ ನೆಲ; ಉಧೋ ಎಂದು ಬೀಸುವ ಗಾಳಿ; ಮರದಿಂದ ಕಟ್ಟಿದ ಮನೆಗಳು; ಅರಗಿನ ಅರಮನೆಯಂತೆ ಉರಿದು ಹೋಗಲು ಒಂದು ನೆಪಕ್ಕೆ ಕಾಯುತ್ತಿರುತ್ತವೆ. ಕವಿದ ಮೋಡಗಳು ಮಳೆಯ ಬದಲು ಬರೀ ಮಿಂಚನ್ನು ಹರಿಸಿ ಕಿಡಿಕಾರುತ್ತವೆ. ಅದಲ್ಲದಿದ್ದರೆ ತೂಗುವ ವಿದ್ಯುತ್ ತಂತಿಗಳು; ಅದೂ ಅಲ್ಲದಿದ್ದರೆ ಮತ್ತೇನೋ ನೆಪಗಳು.

'ಮತ್ತೆ ಕಟ್ಟಿಸಿರಬೇಕಲ್ಲಾ?' ಅಂದೆ. ಬೆರಳೆಣಿಕೆಯಷ್ಟು ವರ್ಷಗಳಲ್ಲಿ ನಗರಗಳೇ ನಿರ್ಮಾಣವಾಗುವ ಕಾಲವಿದು.

'ಶಾಲೆ ತಯಾರಾಗ್ತಾ ಇದೆ. ಆದರೆ ನಾವು ಊರುಬಿಟ್ಟು, ನಗರ ಸೇರಿದ್ದೇವೆ. ಆಗಿನಿಂದಲೂ ಡ್ರೈವಿಂಗ್ ಕೆಲಸ. ಮತ್ತೆ ಮನೆಕಟ್ಟಲು ದುಡ್ಡು ಬೇಕಲ್ವಾ?'

ಅವನಲ್ಲಿ ನೋವಿದ್ದಂತಿರಲಿಲ್ಲ, ಅಥವಾ ತೋರಿಸಿಕೊಳ್ಳಲಿಲ್ಲ. ಸ್ವಾಭಿಮಾನಿ ಹುಡುಗ.

'ನಿಮ್ಮ ವೃದ್ಧಾಶ್ರಮ ಉಳಿಯಬಹುದು ಎನ್ನಿಸುತ್ತದೆಯೇ?' ಎಂದು ಕೇಳಿದ. ಅವನು ಹಾಗೆ ಕೇಳಿದಾಗಲೇ ಆ ಪ್ರಶ್ನೆಗೆ ನಾನಿನ್ನೂ ಉತ್ತರ ಹುಡುಕಬೇಕಿದೆ ಎಂದು ಹೊಳೆದದ್ದು..

'ತುಂಬಾ ಕಷ್ಟ, ಬೆಂಕಿ ಆಗಲೇ ಬಹಳ ಸಮೀಪದವರೆಗೆ ಬಂದಿದೆ. ಉಳಿಯಲಾರದು' ಎಂದು ಹೇಳಲು ಹಿಂಜರಿದೆ.

'ವೃದ್ಧಾಶ್ರಮ ಸುಟ್ಟು ಹೋದರೆ ಕಟ್ಟಲು ಸಮಯ ಬೇಕು. ಆನಂತರ... ಮತ್ತೆ ಅಲ್ಲಿಗೆ ವಾಪಸು ಹೋಗುತ್ತೀರಾ?'

ನನ್ನನ್ನೂ ಸೇರಿಸಿ ಅಲ್ಲಿದ್ದ ಎಲ್ಲ ವೃದ್ಧರಿಗೂ ಸೇರಿದ್ದ ಆ ವೃದ್ಧಾಶ್ರಮ ಅದು. ಏನೇನೋ ಕಸರತ್ತು ಮಾಡಿಕೊಂಡವರಿದ್ದರು. ಈಗ ಒಮ್ಮೆಗೇ ಹೀಗೆ ಉರಿದುಹೋದರೆ! ಎಲ್ಲ ಸರಿಹೋಗಿ ಕಟ್ಟಿಸಲಿಕ್ಕೆ ಎರಡು ವರ್ಷ ಬೇಕಾಗಬಹುದೇನೋ? ಅಲ್ಲಿಯವರೆಗೆ ಯಾರ್‍ಯಾರು ಎಲ್ಲೆಲ್ಲಿ ಉಳಿಯುತ್ತಾರೋ, ಹೇಗಿರುತ್ತಾರೋ? ಇಷ್ಟೆಲ್ಲ ಮನೆಗಳು ಒಮ್ಮೆಗೇ ಉರಿದುಹೋದರೆ ಹಣ ಕೊಡಲು ಇನ್ಶೂರೆನ್ಸ್ ಕಂಪನಿ ಉಳಿಯಬಹುದೇ? ಮುಂದೆ...

ಆ ಪ್ರಶ್ನೆಯನ್ನು ಉತ್ತರಿಸುವವರೆಗೆ ಮೆಸೇಜ್ ಬಂದಿದೆಯೆಂದು ನನ್ನ ಫೋನ್ ಎಚ್ಚರಿಸಿತು. ನೋಡಿದೆ. ನಾನು ಕರೆ ಹೇಳಿದ ಟ್ರಾವೆಲ್ ಕಂಪನಿ, ಸಿಂಗ್ ಆಂಡ್ ಸಿಂಗ್ ಟ್ರಾವೆಲ್ಸ್‌ನ ರಾಂಜಿಯ ಮೆಸೇಜು:

'ಕಾರು ಹೋಗಿ ನಿಮ್ಮನ್ನು ಅಲ್ಲಿ ಕಾಣದೆ ವಾಪಸು ಬರುತ್ತಿದೆಯಂತೆ; ಆಗಲೇ ಹೊರಟಿರುವಿರಾ?'.

ಆಶ್ಚರ್ಯವಾಯಿತು, ಹೆದರಿಕೆಯೂ ಆಯಿತು. ಹಾಗಾದರೆ ಈ ಹುಡುಗ ಯಾರು? ನನ್ನ ಹೆಸರು ಹೇಳಿ ಹೇಗೆ ಕರೆದಿರಬಹುದು? ಹೊರಗೆ ನಾವೆಲ್ಲಿದ್ದೇವೆ ಎಂದು ತಿಳಿಯಲಾಗದಷ್ಟು ಕತ್ತಲೆ.

'ಹೊರಟಿದ್ದೇನೆ, ಆದರೆ ಕಾರು ಯಾರದ್ದು ಎಂದು ತಿಳಿದಿಲ್ಲ' ಎಂದು ರಾಂಜಿಗೆ ಮೆಸೇಜ್ ಮಾಡಿದೆ.

ಸರಿಯಾಗಿ ವಿಚಾರಿಸಿಕೊಳ್ಳದೆ ಸಾವಿಗೆ ಹೆದರಿ ಈ ಕಾರು ಹತ್ತಿಬಿಟ್ಟೆನೆ? ನನ್ನ ಹೆಸರು ಇವನಿಗೆ ತಿಳಿದದ್ದಾದರೂ ಹೇಗೆ? ಗಾಬರಿಯೊಟ್ಟಿಗೆ, ನನ್ನ ದುಡುಕಿನ ನಿರ್ಧಾರದ ಬಗ್ಗೆ ತಿರಸ್ಕಾರವೂ.

'ಕಾಳಜಿಯಿಂದ ಇರಿ. ಎಲ್ಲಿದ್ದೀರಿ ಎಂದು ತಿಳಿಸಿದರೆ ಕಾರು ಕಳುಹಿಸುತ್ತೇನೆ. ನಿಮ್ಮ ಉತ್ತರಕ್ಕಾಗಿ ಕಾಯುತ್ತೇನೆ' ಎಂಬ ಪ್ರತ್ಯುತ್ತರ ಬಂತು.

'ಅಜ್ಜಿ, ನನಗೆ ಉತ್ತರವನ್ನೇ ಕೊಟ್ಟಿಲ್ಲ ನೀವು, ಮತ್ತೆ ಹೋಗ್ತೀರಾ ಅಂತ ಕೇಳಿದೆ'

ಮತ್ತೆ ಪ್ರಶ್ನೆ; ಈಗ ಅವನ ದನಿಯಲ್ಲಿ ಅಸಹನೆ ಇತ್ತು. ಇವನಿಗೆ ಅದರ ಅಗತ್ಯವೇನಿದೆ. ರಾತೋರಾತ್ರಿ ಆವರಿಸಿಕೊಂಡ ಕಾಡ್ಗಿಚ್ಚು ಅರೆನಿದ್ದೆಯಿಂದ ಎದ್ದ ನನ್ನನ್ನು ಮಂಕು ಮಾಡಿರಬಹುದು. ಪೂರ್ವಾಪರಗಳನ್ನು ಹೆಚ್ಚು ಕೇಳದೇ ಅಪರಿಚಿತನ ಕಾರು ಹತ್ತುವಂತೆ ಅಸಹಾಯಕಳನ್ನಾಗಿಯೂ ಮಾಡಿರಬಹುದು. ಆದರೆ ಈಗ... ಯಾರನ್ನೂ ಪೂರ್ತಿ ನಂಬದ ನಾನು ಇನ್ನಷ್ಟು ಎಚ್ಚರಗೊಂಡೆ. ನನ್ನೊಳಗಿನ ತುಮುಲವನ್ನು ಆದಷ್ಟು ಹತ್ತಿಕ್ಕುತ್ತ ಹೇಳಿದೆ.

'ಆದಾಗ ನೋಡಿದರಾಯಿತು ಬಿಡು'

ಅವನು ಆಗಾಗ ಹಿಂಗನ್ನಡಿಯಲ್ಲಿ ನನ್ನನ್ನು ಗಮನಿಸುತ್ತಿದ್ದ.

'ನೀವು ಯಾವ ವಿಷಯವನ್ನೂ ಬಿಟ್ಟುಕೊಡುವುದಿಲ್ಲ, ಒಳ್ಳೆ ಕೋಟೆಯ ಹಾಗಿದ್ದೀರಿ! ಮನೆಯಿಂದ ಮೆಸೇಜ್ ಬಂತೆ?'

ಇವನೂ ನನ್ನನ್ನು ಕೋಟೆಯೆಂದನೇ! ಮನೆಯಲ್ಲಿ ನನ್ನ ಗುಣವಿಶೇಷಣ ಅದು. ಯಾವುದನ್ನೂ ಬಿಟ್ಟು ಕೊಡದ, ಯಾವ ಆಕ್ರಮಣಕ್ಕೂ ಒಳಗಾಗದ ಅಬೇಧ್ಯ